# ಆಹಾ ಸುದ್ದಿ!

★ ಸಸಿತೋಟ



ಚೀನಾದಲ್ಲಿ ಯಾವುದೇ ಕಾರ್ಯಕ್ರಮವಿರಲಿ, ಗಾಜಿನ ಗುಮ್ಮಟದಲ್ಲಿ ಹಾರುವ ನೋಟುಗಳನ್ನು ಹಿಡಿಯುವ ಆಟವೊಂದು ಇರುವುದು ಸಾಮಾನ್ಯ ಸಂಗತಿ ಆಗಿಬಿಟ್ಟಿದೆಯಂತೆ, ನಮ್ಮಲ್ಲಿ ವೇದಿಕೆ ಖಾಲಿ ಬಿಡಬಾರದೆಂದು ಸಂಗೀತ, ಮಿಮಿಕ್ರಿ ಶುರು ಮಾಡಿಕೊಂಡ ಹಾಗೆ. 20 ಸೆಕೆಂಡ್‌ಗಳಲ್ಲಿ ತುಂಡುಡುಗೆ ತೊಟ್ಟ ನೀರೆಯರು ಹಾರಿ ಹಾರಿ ನೂರು ಯುವಾನ್ ಮೌಲ್ಯದ ಎಷ್ಟು ನೋಟುಗಳನ್ನು ಹಿಡಿದುಕೊಳ್ಳುತ್ತಾರೋ ಅಷ್ಟೂ ಹಣವನ್ನು ಅವರಿಗೇ ಬಹುಮಾನವಾಗಿ ಕೊಡುತ್ತಾರಂತೆ. ಯುವಾನ್ ಮೌಲ್ಯವನ್ನು ತಗ್ಗಿಸಿದ ಮೇಲೆ ಯುವತಿಯರ ಉಡುಗೆಯ ಉದ್ದವನ್ನು ಹೀಗೆ ತಗ್ಗಿಸಬಾರದಿತ್ತು.




ಜಪಾನಿನ ಶತಾಯುಷಿ ಮಿಯಾಝಾಕಿ ನೂರು ಮೀಟರ್ ಓಟದ ಸ್ಪರ್ಧೆಯಲ್ಲಿ ದಾಖಲೆ ಮಾಡಿದ (42.22 ಸೆ.) 105 ವರ್ಷದ ವ್ಯಕ್ತಿ ಎಂಬ ಸಾಧನೆ ಮಾಡಿದ್ದಾರೆ. ಜಮೈಕಾದ ಅಥ್ಲೀಟ್ ಉಸೇನ್ ಬೋಲ್ಟ್‌ಗೆ ಪೈಪೋಟಿ ನೀಡಲು ಉತ್ಸುಕರಾಗಿರುವ ಮಿಯಾಝಾಕಿ ಓಡಲು ಶುರು ಮಾಡಿದ್ದು 90 ದಾಟಿದ ಮೇಲಂತೆ. ಮಿಯಾಝಾಕಿಯ ದಾಖಲೆ ಮುರಿಯಲು ಉತ್ಸಾಹ ಇರುವವರು ಇನ್ನೂ ಸಮಯವಿದೆ ಎಂದು 105 ಆಗುವವರೆಗೆ ಆರಾಮವಾಗಿ ಕೂರಬಹುದು.

ಏರ್ ಇಂಡಿಯಾದಲ್ಲಿ ಇತ್ತೀಚೆಗೆ 130 ಮಂದಿ ವೈಮಾನಿಕ ಉದ್ಯೋಗಿಗಳಿಗೆ ಆಕಾಶದಲ್ಲಿ ಹಾರಾಡುವ ಕೆಲಸಕ್ಕೆ ವಿರಾಮ ಕೊಟ್ಟು ನೆಲದಲ್ಲಿರುವ ಕಚೇರಿಗೆ ಹಾಕಿದ್ದಾರಂತೆ. ವಿಮಾನದಲ್ಲಿ ಹಾರಾಡಲು ಬೇಕಾಗಿರುವ ಅರ್ಹತೆಯೆಂದರೆ ಹಕ್ಕಿಯಂತೆ ಕಡಿಮೆ ತೂಕ. ಬಿಎಂಐ 22ಕ್ಕಿಂತ ಹೆಚ್ಚಾಯ್ತೆಂದರೆ ನೆಲದಲ್ಲಿ ವಾಸವೇ ಗತಿ. ಸಿಬ್ಬಂದಿಗೆ ಈ ಶಿಕ್ಷೆ ನೀಡುವ ಬದಲು ದಢೂತಿ ಪ್ರಯಾಣಿಕರಿಗೆ ನಿಷೇಧ ಹಾಕುವುದು ಮೇಲು ಎಂದು ಒಳಗೊಳಗೇ ಎಷ್ಟು ಮಂದಿ ಸಿಬ್ಬಂದಿ ಗೊಣಗಿಕೊಂಡರೋ!

ಇಂಗ್ಲೆಂಡ್‌ನ ಸಸೆಕ್ಸ್‌ನ ಬೆಕ್ಕೊಂದು ಎರಡು ಬಾರಿ ಗುಂಡಿನ ದಾಳಿಗೆ ಒಳಗಾದರೂ ಬದುಕಿ ಉಳಿದಿದೆಯಂತೆ. ಒಂದು ಕಾಲು, ಭುಜಕ್ಕೆ ಏಟಾಗಿದ್ದು ಕುಂಟಿಕೊಂಡು ಓಡಾಡುತ್ತಿದೆಯಂತೆ. ಎರಡು ಬಾರಿ ದಾಳಿಗೆ ಒಳಗಾಗಿದ್ದಕ್ಕೆ ದುರದೃಷ್ಟ ಎನ್ನಬೇಕೋ, ಬದುಕುಳಿದಿದ್ದಕ್ಕೆ ಅದೃಷ್ಟ ಎನ್ನಬೇಕೋ ಎಂದು ಬೆಕ್ಕಿನ ಮಾಲೀಕ ಹೇಳುತ್ತಿದ್ದಾನಂತೆ. ಅಷ್ಟಕ್ಕೂ ಈ ಬೆಕ್ಕಿನ ಹೆಸರೇನು ಗೊತ್ತೇ? ಅರ್ನಾಲ್ಡ್ ಸ್ವಾರ್ಝ್‌ನೆಗರ್! ಹಾಲಿವುಡ್‌ನ ಈ ನಟ ಎರಡು ವರ್ಷಗಳ ಹಿಂದೆ ಇಂಥದ್ದೇ ದಾಳಿಗೆ ಒಳಗಾಗಿದ್ದ.



ಫ್ಲಾರಿಡಾದ ನಿಕೋಲ್ ಎಂಬಾಕೆ ತನ್ನ ಮೊಬೈಲ್ ಮನೆ ತುಂಬಾ 3,700ಕ್ಕೂ ಅಧಿಕ ಹರಿತ ಆಯುಧಗಳನ್ನು ಸಂಗ್ರಹಿಸಿದ್ದಳಂತೆ. ಬ್ಲೇಡ್, ಖಡ್ಗ, ಚಾಕೂವಿನಿಂದ ಹಿಡಿದು ಪ್ರಾಣಿಗಳನ್ನು ಹಿಡಿಯುವ ಕತ್ತರಿಯಂತಹ (ಟ್ರ್ಯಾಪ್) ಸಾಧನಗಳೂ ಅಲ್ಲಿದ್ದವಂತೆ. ಜೊತೆಗೆ ಕೃತಕ ಕಾಲು, ಕೈ, ಅಸ್ಥಿಪಂಜರಗಳು... ಪೊಲೀಸರು ಹೋಗಿ ಈ ಮೊಬೈಲ್ ಮನೆ ಕೆಡಿಸದಿದ್ದರೆ ದೆವ್ವದ ಮನೆ ಸೆಟಿಂಗ್ ಹಾಕಲು ವೈನಾಗಿರ್ತಿತ್ತು ಎಂದು ಹಾಲಿವುಡ್ ನಿರ್ದೇಶಕರು ಕೈ ಕೈ ಹಿಸುಕಿಕೊಂಡಿರಬಹುದು.



ಝೆಕ್ ಅಧ್ಯಕ್ಷ ಮಿಲೋಸ್ ಚೀನಾ ಮತ್ತು ರಷ್ಯಾಗೆ ಹತ್ತಿರವಾಗಿರುವುದನ್ನು ಪ್ರತಿಭಟಿಸಿ, ಅರಮನೆ ಮೇಲಿರುವ ರಾಷ್ಟ್ರಧ್ವಜ ಕೆಳಗಿಳಿಸಿದ ಈ ಪ್ರತಿಭಟನಾಕಾರರು ಕೆಂಪು ಬಾಕ್ಸರ್ ಚೆಡ್ಡಿ ಹಾರಿಸಿದ್ದಾರೆ. ಈ ಕೆಲಸದ ಸಲುವಾಗಿ ಅರಮನೆ ಕಟ್ಟಡವನ್ನು ಕದ್ದುಮುಚ್ಚಿ ತೆವಳಿಕೊಂಡೇ ಹತ್ತಿದರಂತೆ ಈ ಸಾಹಸಿಗರು. ಪ್ರತಿಭಟನೆಗೆ ಪ್ರಾಣಿಗಳನ್ನು ಎಳೆದು ತರುವುದಕ್ಕಿಂತ ಚೆಡ್ಡಿ ಹೊಲಿಸಿ ಒಯ್ಯುವುದು ಸುಲಭದ ಕೆಲಸ.